**DW-5:** ಸುಬ್ರನಾಯ್ಕ

ದಿನಾಂಕಃ **10.03.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ ವಾದಿಗಳ ಪರವಾಗಿ ಶ್ರೀ ಐ.ಎಸ್.ಎ. ವಕೀಲರಿಂದಃ**

1. ನಾನು 2009-10 ರಿಂದ ಪತ್ರಬರಹಗಾರನಾಗಿ ಕೆಲಸ ಮಾಡುತ್ತಿದ್ದೇನೆ. ದಾನಪತ್ರ ಬರೆಯುವ ಸಂದರ್ಭ ನಾರಾಯಣಪ್ಪ, ಅಶ್ವತ್ಥಪ್ಪ ಮತ್ತು ಗೋವಿಂದಪ್ಪ ಇದ್ದರು. ನವೋದಯ ಕಂಪ್ಯೂಟರ್ ಬಳಿ ಪತ್ರವನ್ನು ತಯಾರಿಸಿರುತ್ತೇವೆ. ಆ ದಿನ ಪಹಣಿ, ಮುಟೇಷನ್ ಮತ್ತು ಊಯಿಲನ್ನು ತಂದಿದ್ದರು. ಊಯಿಲಿನಂತೆ ಎಂ.ಆರ್. ನಂ.09/1990-91 ರಂತೆ ನಾರಾಯಣಪ್ಪ ರವರ ಹೆಸರಿಗೆ ಖಾತೆಯಾಗಿತ್ತು. ಯರ್ಾಪ್ಪೆ ಗ್ರಾಮದ ಸ.ನಂ. 51/1, 57/4 ರ 8 ಎಕರೆ, ಸ.ನಂ. 40/2 ರಲ್ಲಿ 3 ಎಕರೆ 3 ಗುಂಟೆ. ದಾನಪತ್ರವನ್ನು ಸುಮಾರು 10.30-11.00 ರ ಸಮಯಕ್ಕೆ ಅವರ ಕೈಗೆ ನೀಡಿರುತ್ತೇನೆ. ನವೋದಯ ಕಂಪ್ಯೂಟ್ ಸೆಂಟರ್ ನ ಪ್ರಶಾಂತ್ ರವರು ಪತ್ರವನ್ನು ತಯಾರಿಸಿರುತ್ತಾರೆ. ದಾನಪತ್ರಕ್ಕೆ ಮೊದಲು ನಾರಾಯಣಪ್ಪ ರವರು ಸಹಿ ಮಾಡಿರುತ್ತಾರೆ. ನಾರಾಯಣಪ್ಪ ರವರ ನಂತರ ಅಶ್ವತ್ಥಪ್ಪ ರವರು ಸಹಿ ಮಾಡಿರುತ್ತಾರೆ. ನಂತರ ಗೋವಿಂದಪ್ಪ ಮತ್ತು ಗೋವಿಂದರೆಡ್ಡಿ ರವರ ಸಹಿ ಮಾಡಿರುತ್ತಾರೆ. ಆ ದಿನ ಪಹಣಿ ಪತ್ರಿಕೆಗಳನ್ನು ನನಗೆ ನೀಡಿದ್ದರು. ನಾರಾಯಣಪ್ಪ ರವರ ಹೆಸರಿನಲ್ಲಿ ಯಾವುದೇ ದಾಖಲಾತಿಗಳು ಇರಲಿಲ್ಲ ಎಂದರೆ ಸರಿಯಲ್ಲ. ನಾನು ದಾಖಲಾತಿಗಳನ್ನು ಪರಿಶೀಲಿಸದೇ ನಾರಾಯಣಪ್ಪ ರವರು ಹೇಳಿದಂತೆ ಸ್ವತಃ ಬರೆದಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 6, 7, 11 ಮತ್ತು 12 ನೇ ಪ್ರತಿವಾದಿಗಳ ಪರವಾಗಿ ಶ್ರೀ ಎಸ್.ಆರ್.ವಿ. ವಕೀಲರಿಂದಃ**

ಆ ದಿನ ಓ.ಎಸ್. 42/2013 ರ ರಾಜೀ ಡಿಕ್ರಿ ಮತ್ತು ಊಯಿಲನ್ನು ತಂದಿದ್ದೇವು. ರಾಜೀ ಡಿಕ್ರಿ ನಾರಾಯಪಣ್ಣ ಮತ್ತು ಅಶ್ವತ್ಥಪ್ಪ ರವರ ನಡುವೆ ಆಗಿತ್ತು. ರಾಜೀ ಡಿಕ್ರಿಯಲ್ಲಿ ಸ್ವತ್ತನ್ನು ಅಶ್ವತ್ಥಪ್ಪ ರವರಿಗೆ ಬಿಟ್ಟುಕೊಡಲಾಗಿದೆ. ಸ.ನಂ. 51/1, 57/4 ರ 8 ಎಕರೆ, ಸ.ನಂ. 40/2 ರಲ್ಲಿ

3 ಎಕರೆ 3 ಗುಂಟೆಯ ಸ್ವತ್ತುಗಳು ಬಂದಿರುತ್ತವೆ. ರಾಜೀ ಡಿಕ್ರಿಯಂತೆ ಅಶ್ವತ್ಥಪ್ಪ ರವರಿಗೆ ಖಾತೆಯಾಗಿರಲಿಲ್ಲ. ನಾರಾಯಣಪ್ಪ ರವರಿಗೆ ದಾನಪತ್ರವನ್ನು ಬರೆದುಕೊಡಲು ಯಾವುದೇ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ನಾನು ನಾರಾಯಣಪ್ಪ ರವರು ಸೇರಿಕೊಂಡು ದಾನಪತ್ರವನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಪತ್ರ ನೋಂದಣಿ ಮಾಡಿಸಲು ನಾನು ಹೋಗಿಲ್ಲ. ನಂತರ ಬೆಳವಣಿಗೆಗಳು ನನಗೆ ಗೊತ್ತಿಲ್ಲ.

**ಮರು ವಿಚಾರಣೆಃ** ಇಲ್ಲ.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

Sd/-

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.

ಪಾವಗಡ.